ಶ್ರೀ ಎಸ್. ನಿಜಲಿಂಗಪ್ಪ.—ಫೋರ್‌ಷೋರ್ (Foreshore) ಇರತಕ್ಕ ರೈತರು ನಮಗೆ ಬಾವಿಗಳನ್ನು ತೆಗೆಸಿಕೊಡಬೇಕೆಂದು ಕೇಳಿದ್ದಾರೆ. ಅದು ಸರಕಾರದ ಪರ್ಯಾಲೋಚನೆಯಲ್ಲಿದೆ. ಇದಕ್ಕಾಗಿ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ.

ಶ್ರೀ ವೀರಭದ್ರಪ್ಪ ಈರಪ್ಪ.—ಪುನರ್ವಸತಿ ಗ್ರಾಮುಗಳಲ್ಲಿ ಮಠ, ದೇವಾಲಯ, ಮಸೀದಿ ಮುಂತಾದ ಧಾರ್ಮಿಕಸಂಸ್ಥೆಗಳ ಹಣವನ್ನು ಸರಿಯಾಗಿ ಉಪಯೋಗ ಮಾಡುತ್ತಿಲ್ಲವೆಂದು ದೂರು ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಬಂದಿಲ್ಲ. ಹೆಚ್ಚಿನ ರೀತಿಯಲ್ಲಿ ಏನಾದರೂ ಸಹಾಯ ಮಾಡಬೇಕೆಂಬ ಕೋರಿಕೆ ಬಂದರೆ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಮನೆ ಮಠ ಕಳೆದುಕೊಂಡಿರುವವರಿಗೆ ಅನುಕೂಲ ಮಾಡಿಕೊಟ್ಟಿದ್ದೀರಿ. ಆದರೆ ಆ ಗ್ರಾಮಗಳಲ್ಲಿ ಮನೆ ಮಠ ಏನೂ ಇಲ್ಲದೆ ವ್ಯವಸಾಯ ಮಾಡಿ ಕೂಲ ಮಾಡುವವರಿಗೆ ಏಕೆ ವ್ಯತ್ಯಾಸ ಮಾಡಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಕಷ್ಟವಿರುವುದನ್ನು ಗಮನಕ್ಕೆ ತಂದರೆ ಯೋಚನೆ ಮಾಡುತ್ತೇವೆ.

Sri SANJEEVANATH AIKALA.—May I know whether it is not a fact that a large number of workers who were drafted for the work of construction of the Tungabhadra Dam after completion of the Work occupied the lands at Hampi and Pampasagar round about Kampli without proper allotment of the lands to them ?

ಶ್ರೀ ಎಸ್. ನಿಜಲಿಂಗಪ್ಪ.—ಅಂಥ ದೂರು ಏನೂ ಬಂದಿಲ್ಲ.

Sri N. O. SAMAJI.—(put a supplementary in Marathi).

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲಿ ಜನರಿಗೆ ಸೇರಿದ ಮನೆ ಮತ್ತು ಜಮೀನು ಮುಳುಗಡೆಯಾಗಿದೆಯೋ ಅಲ್ಲಿ ಸಾಕಷ್ಟು ಪರಿಹಾರ ಕೊಡುತ್ತೇವೆ.

Grant of Land in Kolar District.

*Q.—375. Sri P. VENKATAGIRIYAPPA (Kolar).—

Will the Government be pleased to state :—

(*a*) the number of persons and the extent of land granted in Kolar District for the last three years ;

(*b*) whether they are aware that grants have been made in favour of sufficient holders in violation of land grant rules ;

(*c*) if so, what action Government have taken in the matter ?

A.—Sri M. V. KRISHNAPPA (Minister for Revenue).—

(*a*)—	*Year*	*No. of persons*	*Extent* A G
	1962-63	2,050	5,372-30
	1963-64	2,334	5,426-10
	1964-65	2,065	4,668-28

(*b*) No.

(*c*) Does not arise in view of reply to clause (*b*).

ಶ್ರೀ ಪಿ. ವೆಂಕಟಗಿರಿಯಪ್ಪ.—ನಿಯಮಾವಳಿಗೆ ವಿರುದ್ಧವಾಗಿ ಸಾಕಷ್ಟು ಜಮೀನು ಹೊಂದಿರುವವರಿಗೆ ಜಮೀನನ್ನು ಕೊಟ್ಟಿರುವುದು ಗೊತ್ತಿಲ್ಲವೆಂದು ಉತ್ತರದಲ್ಲಿ ಹೇಳಿದೆ. ಹಾಗೆ ಕೊಟ್ಟಿರುವುದನ್ನು ಗಮನಕ್ಕೆ ತಂದರೆ ಅದನ್ನು ವಜಾ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರಕಾರಕ್ಕೆ ವಜಾ ಮಾಡುವುದಕ್ಕೆ ಅಧಿಕಾರವಿಲ್ಲ. ರೆವೆನ್ಯೂ ಕೋಡಿನ ಪ್ರಕಾರ ಅಮರ್ಥಾರರು ಲ್ಯಾಂಡ್‌ಗ್ರಾಂಟ್ ರೂಲ್ಸನ್ನು ವಯೋಲೇಟ್ ಮಾಡಿದರೆ ಅಸಿಸ್ಟೆಂಟ್ ಕಮಿಷನರಿಗೆ ಅಪೀಲು ಮಾಡುತ್ತಾರೆ, ಅಸಿಸ್ಟೆಂಟ್ ಕಮಿಷನರು ವಯೊಲೇಟ್ ಮಾಡಿದರೆ ಜಿಲ್ಲಾಧಿಕಾರಿಗಳಿಗೆ ಅಪೀಲು ಮಾಡುತ್ತಾರೆ. ಜಿಲ್ಲಾಧಿಕಾರಿಗಳು ವಯೋಲೇಟ್ ಮಾಡಿದರೆ ರೆವಿನ್ಯೂ ಅಪೆಲೇಟ್ ಟ್ರಿಬ್ಯೂನಲ್ಲಿಗೆ ಅಪೀಲು ಹಾಕುತ್ತಾರೆ, ಆದರ ಮೇಲೆ ರಿಟ್ ಹಾಕುತ್ತಾರೆ. ಈ ಸಂಬಂಧದಲ್ಲಿ ಸರ್ಕಾರಕ್ಕೆ ಅಧಿಕಾರವಿಲ್ಲ. ಕೋರ್ಟಿಗೆ ಅಧಿಕಾರವಿದೆ. ಆ ಕೆಲಸ ಪ್ರತಿದಿನ ಆಯರುಗಳು ಮಾಡುತ್ತಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೆಲವು ಅಧಿಕಾರಿಗಳು ಕಾನೂನಿಗೆ ವಿರೋಧವಾಗಿ ವರ್ತಿಸಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಪ್ರೂವ್ ಮಾಡಿದರೆ ತಕ್ಷಣ ತೆಗೆದುಕೊಳ್ಳುತ್ತೇವೆ.

Sri S. RAJAGOPAL.—May I know the total extent of lands given to Scheduled Caste people ?

Sri M. V. KRISHNAPPA.—I have no details. But most of these lands are generally for Scheduled Castes.

Sri SANJEEVANATH AIKALA.—May I know whether the same facilities and financial assistance are given to the displaced persons in places other than this area, for instance persons displaced in Panambur in the Harbour Project area ?

Sri M. V. KRISHNAPPA.—Under the Land Grant Rules if there is any land available to be granted in any place, first priority is given to them.

Sri S. RAJAGOPAL.—In Bangarpet taluk, may I know the number of persons and the extent of land allotted to them ?

Sri M. V. KRISHNAPPA.—I do not have the details now. I am prepared to give it to the hon'ble member.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅನೇಕರು ಅಮರ್ಥಾರರು ಮತ್ತು ಅಸಿಸ್ಟೆಂಟ್ ಕಮಿಷನರುಗಳಿಗೆ ಅರ್ಜಿ ಜಮೀನಿಗಾಗಿ ಕೊಟ್ಟಾಗ ತಮ್ಮಂಥವರು ಫೋನು ಮಾಡಿ ಮಂಜೂರು ಮಾಡಿಸಿರುವುದೆಷ್ಟು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅನೇಕ ವೇಳೆ ತಮ್ಮಂಥವರು ಬಂದು ಹೇಳಿದಾಗ ಹಾಗೆ ಮಾಡಬೇಕಾಗುತ್ತದೆ.

SHORT NOTICE QUESTION AND ANSWER

Spread of Small Pox in Mangalore

Q.—10 Sri SANJEEVANATH AIKALA (Surathkal).—

Will the Government be pleased to state.—

(*a*) whether it is a fact that Smallpox has been raging since the second week of January in the Mangalore City within the Municipal limits ;

(*b*) if so, what is the total number of attacks so far ;

(*c*) the total number of deaths due to Smallpox attacks ;

(*d*) the preventive and curative steps taken by the Health authorities of the Mangalore Municipality ;

(*e*) the number of patients treated at the Isolation Hospital at Mangalore and the number of deaths of the patients admitted during the above said period in this hospital ?